**ಅಸಲು ದಾವಾ ನಂ.93/2014**

**ಡಿ ಡಬ್ಲ್ಯೂ3**

**(ಸಾಕ್ಷಿಯನ್ನು ಈ ದಿನ ದಿನಾಂಕ.03.03.2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**<u>ಪಾಟೀಸವಾಲು ಃ ವಾದಿ ಪರ ಶ್ರೀ ವಕೀಲರಿಂದಃ</u>**

ಗುರಪ್ಪನ ತಂದೆ ಭೀಮಪ್ಪನಿಗೆ ಎಷ್ಟು ಜನ ಅಣ್ಣತಮ್ಮಂದಿರು ಎಂದು ನನಗೆ ಗೊತ್ತಿರುವುದಿಲ್ಲ. ಭೀಮಪ್ಪ ಅವರ ಒಡಹುಟ್ಟಿದ್ದ ಅಣ್ಣತಮ್ಮಂದಿರಲ್ಲಿ ಹಿರಿಯ ಸಹೋದರ ಎಂದರೆ ಸರಿ. ಭೀಮಪ್ಪ ಇವರ ತಂದೆಯ ಹೆಸರು ವಿಠಪ್ಪ ಎಂದರೆ ಸರಿ. ವಿಠಪ್ಪನ ಮರಣದ ನಂತರ ವಿಠಪ್ಪನ ಆಸ್ತಿಗಳು ಕೇವಲ ಭೀಮಪ್ಪನ ಹೆಸರಿನಲ್ಲಿ ವಾರಸು ಆಗಿತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ಒಂದಾದ ಸರ್ವೆ ನಂ.138/3 ನ ಜಮೀನು ಭೀವಪ್ಪನಿಗೆ ಯಾವ ರೀತಿ ಬಂದಿರುತ್ತದೆ ಎಂದು ನಾನು ವಿಚಾರಿಸಿರುವುದಿಲ್ಲ. ಸರ್ವೆ ನಂ.138/3 ಜಮೀನನ್ನು ಖರೀದಿಸುವ ಪೂರ್ವದಲ್ಲಿ ಅದಕ್ಕೆ ಸಂಬಂಧಿಸಿದ ಕಂದಾಯ ದಾಖಲಾತಿಗಳನ್ನು ಪರಿಶೀಲನೆ ಮಾಡಿರುತ್ತೇನೆ. ಭೀಮಪ್ಪನ ಪಾಲು ಅದರಲ್ಲಿ ಇರುತ್ತದೆಯೋ ಇಲ್ಲವೋ ಎಂದು ನಾನು ವಿಚಾರಣೆ ಮಾಡಿರುವುದಿಲ್ಲ.

2. ಸರ್ವೆ ನಂ.138 ಮತ್ತು ಇತರ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ದಾವೆ ಚಾಲ್ತಿಯಲ್ಲಿರುವ ಬಗ್ಗೆ ನನಗೆ ಗೊತ್ತಿರಲಿಲ್ಲ. 4 ನೇ ಪ್ರತಿವಾದಿ ಗುರಪ್ಪ ಪ್ರಸ್ತುತ ದಾವೆಯಲ್ಲಿ ಪ್ರಾರಂಭದಿಂದಲೂ ಪಕ್ಷಗಾರನಾಗಿರುತ್ತಾನೆ ಎಂದರೆ ಸರಿಯಲ್ಲ. ಸರ್ವೆ

ನಂ.138/3 ರ ಜಮೀನಿನಲ್ಲಿ ವಾದಿ ಮತ್ತು ಅವನ ಸಹೋದರರು ಎಲ್ಲರಿಗೂ ಕಾನೂನ ಬದ್ಧ ಹಿಸ್ಸಾ ಹಕ್ಕು ಇದ್ದರೂ ಅದನ್ನು ಮುಳುಗಿಸುವ ಉದ್ದೇಶದಿಂದ 4 ನೇ ಪ್ರತಿವಾದಿ ಸದರಿ ಸ್ವತ್ತನ್ನು ನನಗೆ ಕಾನೂನುಬಾಹೀರವಾಗಿ ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಸರ್ವೆ ನಂ.138/3 ರ ಜಮೀನು ವಿಠಪ್ಪ ಇತನಿಗೆ ಸರ್ಕಾರದಿಂದ ಮಂಜೂರು ಆದ ಜಮೀನು ಆಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂನ.138/3 ಅನ್ನು ಖರೀದಿಸುವ ಪೂರ್ವದಲ್ಲಿ ಅದಕ್ಕೆ ಸಂಬಂಧಿಸಿದ ಹಕ್ಕು ಬದಲಾವಣೆ ಮತ್ತು ಪಹಣಿ ಕಂದಾಯ ದಾಖಲಾತಿಗಳನ್ನು ನೋಡಿ ಖರೀದಿಸಿರುತ್ತೇನೆ. ಸರ್ವೆ ನಂ.138/3 ರಲ್ಲಿ ವಾದಿಗೆ 1/3  ಹಿಸ್ಸಾ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇಲ್ಲದೆ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.